# ಸ್ತನ ಚರ್ಮ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಒಂದೇ ದಾರಿ



ಸ್ತನ ಚರ್ಮ ಕ್ಯಾನ್ಸರ್‌ಗೆ ಒಳಗಾದ ನೈಜೇರಿಯಾದ ಮಹಿಳೆಯ ಎಡ ಸ್ತನದಿಂದ ಸುಮಾರು ಐದು ಕೇಜಿ ತೂಕದ ಗಡ್ಡೆಯನ್ನು ಶಸ್ತ್ರಕ್ರಿಯೆ ಮೂಲಕ ತೆಗೆದ ಬೆಂಗಳೂರಿನ ಸ್ಪೈಟೆಕೇರ್ ಆಸ್ಪತ್ರೆಯ ವೈದ್ಯರು ಈ ಮಹಿಳೆಗೆ ಮರುಜನ್ಮ ನೀಡಿದ್ದಾರೆ. ಈ ಪ್ರಕರಣ ವಿಶ್ವದಲ್ಲೇ ಅತ್ಯಂತ ಅಪರೂಪದ್ದಾಗಿದ್ದು ಮಹಿಳೆ ಈಗ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾಳೆ.

■ **ಉಮಾ ಅನಂತ್**

ನೈಜೀರಿಯಾದ ವೈದ್ಯ ವಿದ್ಯಾರ್ಥಿನಿ ಅಮಿನಾಗೆ ವಯಸ್ಸು ಮೂವತ್ತೇಳು. ಅವರು ಸ್ತನದ ಚರ್ಮ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಕಳೆದ ಮೂರು ವರ್ಷ ಹಿಂದೆ ಅವರ ಎಡಭಾಗದ ಸ್ತನದಲ್ಲಿ ಗಡ್ಡೆ ಆಗಿತ್ತು. ನೈಜೀರಿಯಾದ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆದ ಅಮಿನಾಗೆ ಸಾಕಷ್ಟು ಆ್ಯಂಟಿ ಬಯೋಟಿಕ್‌ಗಳನ್ನೂ ನೀಡಿದ್ದರು. ಆದರೆ ಸ್ತನದ ಗಡ್ಡೆ ಬೆಳೆಯುತ್ತಲೇ ಇತ್ತು. ಸ್ನೇಹಿತರ ಸಹಾಯದಿಂದ ಬೆಂಗಳೂರಿನ ಸ್ಪೈಟೆಕೇರ್ ಆಸ್ಪತ್ರೆಗೆ ಬಂದಾಗ ಅವರನ್ನು ಪರೀಕ್ಷೆ ಮಾಡಿದ ವೈದ್ಯರು ತಿಳಿಸಿದ್ದು ಆಕೆಯ ಸ್ತನದಲ್ಲಿ ಸುಮಾರು ಐದು ಕೇಜಿ ತೂಕದ ಗಡ್ಡೆ ಇದೆ; ಇದನ್ನು ಶಸ್ತ್ರಕ್ರಿಯೆ ಮೂಲಕ ಮಾತ್ರವೇ ತೆಗೆಯಬಹುದು ಎಂದು. ವೈದ್ಯರ ಸಲಹೆಯಂತೆ ಶಸ್ತ್ರಚಿಕಿತ್ಸೆಗೆ ಒಳಗಾದ ಅಮಿನಾ ಸದ್ಯ ಆರೋಗ್ಯವಾಗಿದ್ದಾರೆ. ವೈದ್ಯರ ಅಭಿಪ್ರಾಯದಂತೆ ಸ್ತನದಲ್ಲಿ ಚರ್ಮದ ಕ್ಯಾನ್ಸರ್ ಬಂದ ಈ ಪ್ರಕರಣ ವಿಶ್ವದಲ್ಲೇ ಮೊದಲನೆಯದು ಹಾಗೂ ಬಹಳ ಅಪರೂಪದ್ದು.

ಹೌದು, ಭಾರತದಲ್ಲಿ ವಿವಿಧ ರೀತಿಯ ಕ್ಯಾನ್ಸರ್‌ನಿಂದ ಬಳಲುವವರ ಸಂಖ್ಯೆ ಹೆಚ್ಚುತ್ತಿದೆ. ಕಾಯಿಲೆಗಳ ಮಟ್ಟಿಗೆ ಹೃದಯಾಘಾತ ಮೊದಲ ಸ್ಥಾನದಲ್ಲಿದ್ದರೆ ಕ್ಯಾನ್ಸರ್ ಎರಡನೆ ಸ್ಥಾನದಲ್ಲಿದೆ ಎನ್ನುತ್ತದೆ ವಿಶ್ವ ಆರೋಗ್ಯ ಸಂಸ್ಥೆಯ ವರದಿ. ಸ್ತನದ ಚರ್ಮ ಕ್ಯಾನ್ಸರ್‌ಗೆ ತುತ್ತಾದ ಅಮಿನಾಗೆ ಇದ್ದದ್ದು 'ಸಿರಿಗೊಸಿಸ್ಟಡೆನೊಮಾ ಪ್ಯಾಪ್ಲಿಫೆರಮ್' ಎಂಬ ಬಹಳ ಅಪರೂಪದ ಕ್ಯಾನ್ಸರ್. ಈ ಕ್ಯಾನ್ಸರ್‌ಗೆ ಮೊತ್ತ ಮೊದಲ ಬಾರಿಗೆ ಶಸ್ತ್ರಚಿಕಿತ್ಸೆ ಮಾಡಿ ಯಶಸ್ವಿಯಾದ ಖ್ಯಾತಿ ಬೆಂಗಳೂರಿನ ಯಲಹಂಕದಲ್ಲಿರುವ ಸ್ಪೈಟೆಕೇರ್ ಆಸ್ಪತ್ರೆಗೆ ಸಲ್ಲಬೇಕು. ಜತೆಗೆ ಈ ಆಸ್ಪತ್ರೆಯ ಸಹ ಸಂಸ್ಥಾಪಕ ಡಾ. ಅಂಥೋನಿ ಪೈಸ್ ಈ ಅಪರೂಪದ ಶಸ್ತ್ರಚಿಕಿತ್ಸೆ ನಡೆಸಿ ಯಶ ಸಾಧಿಸಿದ ವೈದ್ಯರು.